ಮುತ್ತುಸಾಮಿ 'ನಾಳೆ ತಗೋತೀನಿ' ಎಂದ.

ಅಮ್ಮ ಒಂದೊಂದು ದಿನವಾಗಿ ತಳ್ಳುತ್ತ ಬಂದಳು. ಅವಳು ಕೇಳಿದ ಯಾವ ಜಾಗದಿಂದಲೂ ಹಣ ಹೊಂದಿಸಲಾಗಲಿಲ್ಲ. ಕೊನೆಯ ದಿನದವರೆಗೆ ಅವಳ ಕೈಯಲ್ಲಿ ಒಂದು ರೂಪಾಯಿಯೂ ಸೇರಲಿಲ್ಲ. ಅನಿರೀಕ್ಷಿತವಾಗಿ ಕೊನೆಯ ಗಳಿಗೆಯಲ್ಲಿ ಪುಸ್ತಕಾಲಯದ ಅಧಿಕಾರಿ ಇಪ್ಪತ್ತು ರೂಪಾಯಿ ಕೊಟ್ಟು 'ಓಡು, ಓಡು ಕಾಲೇಜಿಗೆ ಓಡು' ಎಂದು ಕಳುಹಿಸಿಕೊಟ್ಟರು. ಅಪ್ಲಿಕೇಷನನ್ನು ತುಂಬಿಸಿ, ಸರ್ಟಿಫಿಕೆಟ್‌ಗಳನ್ನು ಲಗತ್ತಿಸಿ ಕೊಟ್ಟ ನಂತರ ಅವನಿಂದ ಸಹಜವಾಗಿ ಉಸಿರಾಡಲಾಯಿತು.

ಹತ್ತು ದಿನಗಳಲ್ಲಿ ಉತ್ತರ ಬಂದಿತು. ಗುರುವಾರದಂದು ಖುದ್ದಾಗಿ ಸರ್ಟಿಫಿಕೆಟ್‌ಗಳೊಂದಿಗೆ ಬಂದು ಶುಲ್ಕ ಕಟ್ಟಿ 'ಏ' ಗ್ರೂಪಿನಲ್ಲಿ ಸೇರಿಕೊಳ್ಳುವಂತೆ ಬರೆದಿತ್ತು. 'ಎಷ್ಟು ಕಟ್ಟಬೇಕು?' ಎಂದು ಅಮ್ಮ ಕೇಳಿದಳು. 'ತೊಂಬತ್ತೈದು ರೂಪಾಯಿ' ಎಂದ. ಅಮ್ಮ 'ಇನ್ನೂ ನಾಲ್ಕು ದಿನ ಇದೆಯಲ್ಲಾ. ಬೆಟ್ಟವನ್ನೇ ಹೊರಳಿಸಬಹುದು ಚಿಂತೆ ಬೇಡ' ಎಂದಳು.

ಮಾರನೆಯ ದಿನ ನರ್ಸಮ್ಮನ ಮನೆಯಲ್ಲಿ ಅಡಿಗೆ ಮಾಡಿಟ್ಟು ಹಿಂತಿರುಗಿದ ಅಮ್ಮನ ಮುಖ ಕಳೆಗುಂದಿತ್ತು. ಸ್ವಲ್ಪ ಹೊತ್ತಿನ ನಂತರ 'ಹೋಗಿ ಅಬ್ದುಲ್ ಮಾವನನ್ನು ಕರೆದುಕೊಂಡು ಬಾ ಹೋಗು, ಓಡು' ಎಂದಳು. 'ಯಾಕಮ್ಮ?' ಎಂದು ಕೇಳಿದ. 'ಹೋಗ್ಬಾರೋ ಹೇಳ್ತೀನಿ' ಎಂದು ಅಮ್ಮ ಅವನನ್ನು ಸುಮ್ಮನಾಗಿಸಿದಳು. ಒಂದು ಗಂಟೆ ಕಾಲ ಅಂಗಡಿ ಬೀದಿಯಲ್ಲಿ ಅಲೆದು ಹುಡುಕಾಡಿ ಅವರನ್ನು ಕರೆದುಕೊಂಡು ಮನೆಗೆ ಬಂದ. ಅವರ ಬಳಿ ಮುತ್ತುಸಾಮಿಗೆ ಕಾಲೇಜಿನಲ್ಲಿ ಸೀಟು ಸಿಕ್ಕಿರುವ ವಿಷಯವನ್ನು ಅಮ್ಮ ಹೇಳಿದಳು. ನಂತರ 'ಖರ್ಚಿಗೆ ದುಡ್ಡು ಬೇಕಣ್ಣ. ಹೇಗಾದ್ರೂ ನೀವು ಆ ಸೈಕಲನ್ನ ಮಾರಿ ಬಿಡಬೇಕು. ತುಂಬಾ ಅವಸರ' ಎಂದಳು.

ಅವರಿಗೆ ಗಾಬರಿಯಿಂದ ಮಾತು ಬರಲಿಲ್ಲ. 'ಅವನು ಯಾವಾಗಲಾದರೂ ಬಂದು ಯಾಪಾರಕ್ಕೆ ಸೈಕಲ್ ಬೇಕೂಂದ್ರೆ ಏನಮ್ಮ ಮಾಡೋದು?' ಎಂದು ಚಿಂತೆಯಿಂದ ಕೇಳಿದರು.

'ಹೋಗಿ ಮೂರು ತಿಂಗಳಾಯಿತು. ಹೆಂಡ್ತಿ ಮಕ್ಳು ಏನು ಮಾಡ್ತಾರೆ ಅಂತ ಸ್ವಲ್ಪ ಕೂಡ ಚಿಂತೆ ಇಲ್ದೇ ಹೊರಟೋದ್ರು. ಇನ್ಮೇಲೆ ಅವರು ಬಂದ್ರೇನು ಬರದಿದ್ರೇನು? ಅವರ ಬಗ್ಗೆ ನಾವೇಕೆ ಚಿಂತೆ ಮಾಡ್ಬೇಕು?' ಎನ್ನುತ್ತಾ ಅಮ್ಮ ತಲೆ ತಗ್ಗಿಸಿದಳು.

ಎರಡೇ ದಿನದಲ್ಲಿ ಸೈಕಲ್ ಮಾರಿದ ಹಣದೊಂದಿಗೆ ಅಬ್ದುಲ್ ಮಾವ ಬಂದರು. 'ತಕೋಮ್ಮ, ನೂರ ಹತ್ತು ರೂಪಾಯಿ. ಇಷ್ಟೇಮ್ಮ ಸಿಕ್ಕಿದ್ದು' ಎಂದರು. 'ದೊಡ್ಡವನ ಹತ್ರಾನೆ ಕೊಡಿ ಅಣ್ಣ' ಅಂತ ಅಮ್ಮ ಅವನ ಕಡೆ ಕೈತೋರಿಸಿದಳು. ಅವರು ಕೊಟ್ಟಿದ್ದನ್ನು ಮುತ್ತುಸಾಮಿ ತೆಗೆದುಕೊಂಡು ಮಡಚಿ ಜೇಬಿನಲ್ಲಿಟ್ಟ. ಅಮ್ಮ 'ಅದೇಕಣೋ ನಿನ್ನ ಬಂಡವಾಳ, ಬುದ್ಧಿವಂತಿಕೆಯಿಂದ ಬದಿಕ್ಕೋ' ಎಂದಳು.

ಅವನು ಕಾಲೇಜಿಗೆ ನಡೆದು ಹೋಗಲು ಪ್ರಾರಂಭಿಸಿದ. ಹೋಗಲು ಆರು ಮೈಲಿ, ಹಿಂತಿರುಗಲು ಆರು ಮೈಲಿ. ಗುಂಪುಗುಂಪಾಗಿ ವಿದ್ಯಾರ್ಥಿಗಳು ಸೈಕಲ್ಲಿನಲ್ಲಿ ಹೋದರು. ಅವನು ಶಾಂತವಾಗಿ ರಸ್ತೆಯ ಬದಿಯಲ್ಲಿ ನಡೆದುಹೋದ.

ಬಗೆಬಗೆಯ ಸೈಕಲ್ಲುಗಳನ್ನು ನೋಡಿ ಅವನಿಗೆ ಆಶ್ಚರ್ಯವಾಗಿತ್ತು. ಇದನ್ನು ಹೇಗೆ ಓಡಿಸುತ್ತಾರೆ ಎಂಬುದು ಅದಕ್ಕಿಂತ ಬಹಳ ಆಶ್ಚರ್ಯವಾದ ವಿಷಯವಾಯಿತು. ಒಬ್ಬಿಬ್ಬ ಗೆಳೆಯರು ಅವನಿಗೆ ಸೈಕಲ್ ಕಲಿಸಲು ಮುಂದಾದರು. ಆದರೆ ಅವನಿಗೆ ಅದರಲ್ಲಿ ಸ್ವಲ್ಪವೂ ಆಸಕ್ತಿ ಇಲ್ಲದ್ದರಿಂದ ನಿರಾಕರಿಸಿದ. ಆಗೆಲ್ಲ ಎಲ್ಲ ನೆನಪುಗಳನ್ನು ಒಡೆದುಕೊಂಡು ಅಪ್ಪನ ನೆನಪು